# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 348 (460)**

**ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು (ವಿಧಾನ ಸಭಾ ಚುನಾಯಿತರಾದವರು)**

**ಉತ್ತರಿಸುವ ದಿನಾಂಕ : 10.03.2025**

**ಉತ್ತರಿಸುವವರು : ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ಭೀಮಗಡ ಅಭಯಾರಣ್ಯದ ವ್ಯಾಪ್ತಿಯ ಗ್ರಾಮಗಳ ಜನರನ್ನು ಕಾಡಿನಿಂದ ನಗರಕ್ಕೆ ಸ್ಥಳಾಂತರಿಸಲು ಯಾವ ಯಾವ ಯೋಜನೆಯಡಿ ಕ್ರಮ ಕೈಗೊಳ್ಳಲಾಗಿದೆ ಮತ್ತು ಪುರ್ನವಸತಿ ಕಾರ್ಯಕ್ಕಾಗಿ ಸರ್ಕಾರದ ವತಿಯಿಂದ ಮೀಸಲಿಡಲಾದ ಅನುದಾನವೆಷ್ಟು; | ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ಭೀಮಗಡ ಅಭಯಾರಣ್ಯದ ವ್ಯಾಪ್ತಿಯ ಒಳಗಡೆ ಬರುವ ಕಂದಾಯ ಗ್ರಾಮಗಳಲ್ಲಿರುವ ಜನರು ಸ್ವಯಂ ಪ್ರೇರಿತರಾಗಿ ಪುನರ್ವಸತಿ ಬಯಸಿದ್ದು, ಅವರನ್ನು ಕಾಡಿನಿಂದ ನಗರಕ್ಕೆ ಸ್ಥಳಾಂತರಿಸಿ ಪುನರ್ವಸತಿ ನೀಡಲು ಕಾಂಪಾ ಯೋಜನೆಯಡಿ (2406-04-103-1-06-Others-140 Minor Works) ಈ ವಿಭಾಗಕ್ಕೆ ರೂ. 400.00 ಲಕ್ಷಗಳ ಹಂಚಿಕೆಯಾಗಿ ಬಿಡುಗಡೆಯಾಗಿರುತ್ತದೆ.<br>ಮುಂದುವರೆದು, ತಳೇವಾಡಿ ಗ್ರಾಮದ 32 ಅರ್ಹ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ಜಿಲ್ಲಾ ಮಟ್ಟದ ಸಮಿತಿಯಿಂದ ಅನುಮೋದನೆ ನೀಡಲಾಗಿದೆ. ಮೊದಲ ಹಂತದಲ್ಲಿ 32 ಕುಟುಂಗಳಿಗೆ ಪುನರ್ವಸತಿ ಕಲ್ಪಿಸಲು ಕ್ರಮ ಜರುಗಿಸಲಾಗುತ್ತಿದೆ. |
| ಆ) | ಇಲ್ಲಿಯವರೆಗೆ ಸದರಿ ಅಭಯಾರಣ್ಯದಿಂದ ಸ್ಥಳಾಂತರಿಸಲಾದ ಗ್ರಾಮದ ನಿವಾಸಿಗಳ ಸಂಖ್ಯೆ ಎಷ್ಟು ಮತ್ತು ಇವರುಗಳಿಗೆ ಯಾವ ಯಾವ ಸೌಲಭ್ಯಗಳನ್ನು ನೀಡುವ ಕುರಿತು ಸರಕಾರದ ವತಿಯಿಂದ ನೀತಿಯನ್ನು ರೂಪಿಸಲಾಗಿದೆಯೇ; | |
| ಇ) | ರಾಜ್ಯದ ಕಾಡಂಚಿನಲ್ಲಿ ವಾಸಿಸುತ್ತಿರುವ ನಿವಾಸಿಗಳ/ಗ್ರಾಮಗಳ ಸಂಖ್ಯೆ ಎಷ್ಟು ಮತ್ತು ಅವುಗಳು ಯಾವ ಯಾವ ಜಿಲ್ಲೆಗಳಲ್ಲಿವೆ ಮತ್ತು ಎಷ್ಟು ಜನರನ್ನು ನಗರಕ್ಕೆ ಸ್ಥಳಾಂತರಿಸಲಾಗಿದೆ? (ಮಾಹಿತಿ ನೀಡುವುದು) | ಈ ವಿಭಾಗದ ಖಾನಾಪೂರ ತಾಲ್ಲೂಕಿನ ಭೀಮಗಡ ಅಭಯಾರಣ್ಯದ ವ್ಯಾಪ್ತಿಯ ಒಳಗಡೆ 13 ಗ್ರಾಮಗಳಿವೆ. ಈ ಪೈಕಿ ತಳೇವಾಡಿ ಗ್ರಾಮದ 32 ಕುಟುಂಬಗಳಿಗೆ ಪುನರ್ ವಸತಿ ಕಲ್ಪಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. |

**ಸಂಖ್ಯೆ: ಅಪಜೀ 40 ಎಫ್‌ಡಬ್ಲ್ಯೂಎಲ್ 2025**

(signature)

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.